# ಶಿವನ ಬಗ್ಗೆ ಅಧ್ಯಾತ್ಮಶಾಸ್ತ್ರೀಯ ವಿವೇಚನೆ

## ಮನೋಗತ

ನಮಗೆ ಯಾವುದಾದರೊಂದು ದೇವತೆಯ ಬಗೆಗಿನ ಅಧ್ಯಾತ್ಮಶಾಸ್ತ್ರದ ಮಾಹಿತಿಯು ತಿಳಿದರೆ, ಆ ದೇವತೆಯ ಬಗೆಗಿನ ಶ್ರದ್ಧೆಯು ಹೆಚ್ಚಾಗಲು ಸಹಾಯ ವಾಗುತ್ತದೆ. ಶ್ರದ್ಧೆಯು ಹೆಚ್ಚಾದರೆ ಉಪಾಸನೆಯು ಭಾವಪೂರ್ಣವಾಗಿ ಆಗುತ್ತದೆ. ಭಾವಪೂರ್ಣವಾಗಿ ಮಾಡುವ ಉಪಾಸನೆಯು ಹೆಚ್ಚು ಲಾಭದಾಯಕವಾಗಿರುತ್ತದೆ. ಆದುದರಿಂದ ಈ ಗ್ರಂಥದಲ್ಲಿ ಇತರ ಕಡೆಗಳಲ್ಲಿ ಎಲ್ಲಿಯೂ ಉಪಲಬ್ಧವಿಲ್ಲದ, ಅಧ್ಯಾತ್ಮಶಾಸ್ತ್ರದ ಉಪಯುಕ್ತ ಮಾಹಿತಿಯನ್ನು ನೀಡಲಾಗಿದೆ.

ಶಿವನ ಕೆಲವು ಹೆಸರುಗಳು ಮತ್ತು ಗಂಗೆ, ಮೂರನೆಯ ಕಣ್ಣು, ನಾಗ, ಭಸ್ಮ, ರುದ್ರಾಕ್ಷಿ ಮುಂತಾದ ಶಿವನ ವೈಶಿಷ್ಟ್ಯಗಳ ಆಧ್ಯಾತ್ಮಿಕ ಅರ್ಥ; ಮಹಾತಪಸ್ವಿ, ಭೂತಗಳ ಸ್ವಾಮಿ, ವಿಶ್ವದ ಉತ್ಪತ್ತಿ ಮಾಡುವವನು ಇಂತಹ ಆಧ್ಯಾತ್ಮಿಕ ವೈಶಿಷ್ಟ್ಯಗಳು ಮತ್ತು ಕಾರ್ಯ; ರುದ್ರ, ಕಾಲಭೈರವ, ನಟರಾಜ ಇತ್ಯಾದಿ ರೂಪಗಳು; ಜ್ಯೋತಿರ್ಲಿಂಗ ಮುಂತಾದವುಗಳ ತಾತ್ತ್ವಿಕ ಮಾಹಿತಿ; ಭಸ್ಮವನ್ನು ಹಚ್ಚಿಕೊಳ್ಳುವುದು, ನಂದಿಯ ಕೊಂಬುಗಳ ಮೂಲಕ ಶಿವಲಿಂಗದ ದರ್ಶನ ಪಡೆಯುವುದು, ಶಿವನಿಗೆ ಬಿಲ್ವ ಮತ್ತು ಅಕ್ಷತೆ ಅರ್ಪಿಸುವುದು; ಆದರೆ ಅರಿಶಿನ-ಕುಂಕುಮ ಅರ್ಪಿಸದಿರುವುದು, ಮುಂತಾದ ಉಪಾಸನೆಗೆ ಸಂಬಂಧಿಸಿದ ಪ್ರಾಯೋಗಿಕ ಮಾಹಿತಿಯನ್ನೂ ಶಾಸ್ತ್ರಸಹಿತ ನೀಡಲಾಗಿದೆ. ಶೃಂಗದರ್ಶನ, ಶಿವನಿಗೆ ಬಿಲ್ವವನ್ನು ಅರ್ಪಿಸುವುದು, ಅಭಿಷೇಕ ಮಾಡುವುದು ಮುಂತಾದವುಗಳ ಸಮಯದಲ್ಲಿ ಸೂಕ್ಷ್ಮದಲ್ಲಿ ನಿರ್ದಿಷ್ಟವಾಗಿ ಏನು ನಡೆಯುತ್ತದೆ ಎಂದು ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ. ಇದನ್ನು ತಿಳಿದುಕೊಳ್ಳುವ ಕ್ಷಮತೆ ಯಿರುವ ಸನಾತನದ ಸಾಧಕರು ಮಾಡಿದ 'ಸೂಕ್ಷ್ಮಜ್ಞಾನದ ಪರೀಕ್ಷಣೆ' ಮತ್ತು ತೆಗೆದಿರುವ 'ಸೂಕ್ಷ್ಮಜ್ಞಾನದ ಚಿತ್ರ'ಗಳು ಈ ಗ್ರಂಥದ ಒಂದು ವೈಶಿಷ್ಟ್ಯವಾಗಿದೆ.

ಶಿವನ ಬಗೆಗಿನ ಈ ಅಧ್ಯಾತ್ಮಶಾಸ್ತ್ರೀಯ ಮಾಹಿತಿಯು ಶಿವಭಕ್ತರಿಗೆ ಹಾಗೂ ಶಿವನ ಸಾಂಪ್ರದಾಯಿಕ ಸಾಧನೆಯನ್ನು ಮಾಡುವವರಿಗೆ ಖಂಡಿತವಾಗಿಯೂ ಉಪಯುಕ್ತವಾಗುವುದು; ಆದರೆ ಸಾಮಾನ್ಯ ವ್ಯಕ್ತಿಯು ಮುಂದಿನ ನಿಯಮವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವರಿಗೆ ರಾಮಾಯಣವನ್ನು ಓದಿದ ಮೇಲೆ ಶ್ರೀರಾಮನ, ಶ್ರೀ ಗಣಪತಿ ಅಥರ್ವಶೀರ್ಷವನ್ನು ಓದಿದ ಮೇಲೆ ಶ್ರೀ ಗಣಪತಿಯ ಮತ್ತು ದೇವೀಮಹಾತ್ಮೆಯನ್ನು ಓದಿದ ಮೇಲೆ ದೇವಿಯ ಉಪಾಸನೆಯನ್ನು ಮಾಡಬೇಕೆಂದು ಅನಿಸುತ್ತದೆ. ಅದರಂತೆ ಈ ಪುಸ್ತಕದಲ್ಲಿನ ಮಾಹಿತಿಯನ್ನು ಓದಿ ಕೆಲವರಿಗೆ ಶಿವನ ಉಪಾಸನೆಯನ್ನು ಮಾಡಬೇಕೆಂದು ಅನಿಸಬಹುದು. ಇಂತಹ ವ್ಯಕ್ತಿಗಳು ಗಮನದಲ್ಲಿಡಬೇಕಾದ ವಿಷಯವೇನೆಂದರೆ ಈ ರೀತಿಯ ಉಪಾಸನೆ ಯಿಂದ ಎಲ್ಲರ ಆಧ್ಯಾತ್ಮಿಕ ಉನ್ನತಿಯು ಶೀಘ್ರವಾಗಿ ಆಗಲಾರದು; ಏಕೆಂದರೆ

ಶಿವನ ಉಪಾಸನೆ ಮಾಡುವುದು ಅವರಿಗೆ ಅವಶ್ಯಕವಾಗಿದ್ದರೆ ಮಾತ್ರ ಅದರಿಂದ ಅವರ ಆಧ್ಯಾತ್ಮಿಕ ಉನ್ನತಿಯು ಶೀಘ್ರವಾಗಿ ಆಗುತ್ತದೆ. ಇಲ್ಲವಾದರೆ ಬಹಳಷ್ಟು ಸಾಧನೆಯನ್ನು ಮಾಡಿಯೂ ಹೆಚ್ಚು ಉನ್ನತಿಯಾಗಲಾರದು. ಶಿವನ ಉಪಾಸನೆಯು ಮುಂದಿನ ಹಂತದ ಉಪಾಸನೆಯಾಗಿದೆ. ಅದು ಆವಶ್ಯಕವಾಗಿದೆಯೋ ಅಥವಾ ಇಲ್ಲವೋ ಎಂಬುದು ಸಾಮಾನ್ಯ ವ್ಯಕ್ತಿಗೆ ತಿಳಿಯುವುದಿಲ್ಲ. ಅದು ಆಧ್ಯಾತ್ಮಿಕ ಉನ್ನತಿ ಹೊಂದಿದವರಿಗೆ ಮಾತ್ರ ತಿಳಿಯುತ್ತದೆ. ಆದುದರಿಂದ ಸಾಮಾನ್ಯ ವ್ಯಕ್ತಿಯು ಈ ಗ್ರಂಥವನ್ನು ಮಾಹಿತಿಗಾಗಿ ಮಾತ್ರ ಓದಬೇಕು. ಮುಂದೆ ಶಿವನ ಅನುಭೂತಿಯು ಬರಲು ಸಾಧನೆಯ ಮೊದಲನೆಯ ಹಂತವೆಂದು ತಮ್ಮ ಕುಲದೇವತೆಯ ಹೆಸರನ್ನು 'ಶ್ರೀ.... (ಕುಲದೇವ / ಕುಲದೇವಿಯ ಹೆಸರಿಗೆ ಚತುರ್ಥಿ ವಿಭಕ್ತಿಯ ಪ್ರತ್ಯಯವನ್ನು ಹಾಕಿ) ... ನಮಃ ।' ಈ ಪದ್ಧತಿಯಲ್ಲಿ (ಉದಾ. ಕುಲದೇವಿಯು ಭವಾನಿಯಾಗಿದ್ದರೆ 'ಶ್ರೀ ಭವಾನೀದೇವ್ಯೈ ನಮಃ' ಎಂದು) ಜಪಿಸಬೇಕು. ಮುಂದೆ ಗುರುಗಳು ಶಿವನ ಜಪವನ್ನು ಮಾಡಲು ಹೇಳಿದರೆ, ಶಿವನ ಬಗ್ಗೆ ವಿಶ್ವಾಸ ಹೆಚ್ಚಾಗಲು ಈ ಮಾಹಿತಿಯು ಉಪಯೋಗಕ್ಕೆ ಬರಬಹುದು. ಇತರರಿಗೆ ಈ ಪುಸ್ತಕದಲ್ಲಿನ ಮಾಹಿತಿಯನ್ನು ಓದಿ ಶಿವನ ಬಗ್ಗೆ ಹೊಸ ವಿಷಯಗಳು ತಿಳಿದವು ಎಂದೆನಿಸಬಹುದು.

ಶಿವನ ಉಪಾಸಕರ ಶಿವನ ಮೇಲಿನ ಶ್ರದ್ಧೆಯು ಈ ಗ್ರಂಥವನ್ನು ಓದಿ ದೃಢವಾಗಲಿ ಮತ್ತು ಅವರಿಗೆ ಇನ್ನೂ ಹೆಚ್ಚು ಸಾಧನೆಯನ್ನು ಮಾಡಲು ಪ್ರೇರಣೆಯು ಸಿಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**


**ಕರ್ಮಬಂಧನದಿಂದ ಮುಕ್ತರಾಗಲು ನಾಮದ ಮಹತ್ವ ಹೇಳುವ ಸನಾತನದ ಗ್ರಂಥ !**

## ನಾಮಜಪದ ಮಹತ್ವ ಮತ್ತು ಲಾಭಗಳು

- ಭಗವಂತನ ರೂಪಕ್ಕಿಂತ ಅವನ ನಾಮವು ಏಕೆ ಮಹತ್ವದ್ದಾಗಿದೆ ?
- ನಾಮವು ಸದಾಚಾರಿ ಮತ್ತು ದುರಾಚಾರಿ ಎಲ್ಲರಿಗೂ ಏಕೆ ತಾರಕವಾಗಿದೆ ?
- ನಾಮಜಪದಿಂದ ತೊಂದರೆಗಳು ಹೇಗೆ ನಿವಾರಣೆಯಾಗುತ್ತವೆ ?

**ಸನಾತನದ ಗ್ರಂಥಗಳನ್ನು ನಿಯಮಿತವಾಗಿ ಖರೀದಿಸುವ ವಾಚಕರಿಗೆ ವಿನಂತಿ !**

ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ –

E-mail : chaitanya.grantha@gmail.com ಸಂಚಾರವಾಣಿ : ೯೩೪೨೫೯೯೨೯೯

**'ಸನಾತನ'ದ ಗ್ರಂಥ 'ಆನ್‌ಲೈನ್'ನಲ್ಲಿ ಖರೀದಿಸಲು – www.SanatanShop.com**

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. **ವ್ಯುತ್ಪತ್ತಿ ಮತ್ತು ಅರ್ಥ** ೧೪

೨. **ಕೆಲವೊಂದು ಹೆಸರುಗಳ ಆಧ್ಯಾತ್ಮಿಕ ಅರ್ಥಗಳು** ೧೪

೩. **ಮೂರ್ತಿವಿಜ್ಞಾನ** ೧೬

೪. **ಸನಾತನ ನಿರ್ಮಿತ 'ಶಿವನ ಸಾತ್ತ್ವಿಕ ಚಿತ್ರ ಮತ್ತು ನಾಮಪಟ್ಟಿ'** ೩೧

೫. **ಯೋಗತಜ್ಞ ದಾದಾಜಿ ವೈಶಂಪಾಯನರವರು ಪ.ಪೂ. ಡಾಕ್ಟರರಿಗೆ ನೀಡಿದ ಶಿವನ ತ್ರಿಮಿತಿಯ ಚಿತ್ರದಲ್ಲಿ ಬದಲಾವಣೆಯಾಗುವುದು, ಅದು ಜೀವಂತವಾಗಿರುವಂತೆ ಅರಿವಾಗಿ ಅದರ ಪ್ರಕಾಶದಲ್ಲಿ ಹೆಚ್ಚಳವಾಗುವುದು** ೩೮

೬. **ಶಿವನ ರೂಪಗಳು :** ರುದ್ರ, ಕಾಲಭೈರವ, ವೀರಭದ್ರ, ಭೈರವ (ಭೈರವನಾಥ), ಬೇತಾಳ, ಭೂತನಾಥ, ನಟರಾಜ ಮತ್ತು ಕಿರಾತ ೪೨

೭. **ಪರಿವಾರ :** ಪತ್ನಿ, ಪುತ್ರರು, ಶಿವಗಣಗಳು, ಶಿವದೂತರು ಮತ್ತು ವಾಹನ (ನಂದಿ) ೫೦

೮. **ವೈಶಿಷ್ಟ್ಯಗಳು : ಶಾರೀರಿಕ, ಭೌತಿಕ ಮತ್ತು ಆಧ್ಯಾತ್ಮಿಕ ವೈಶಿಷ್ಟ್ಯಗಳು** ೫೪

೯. **ಕಾರ್ಯ** ೫೯

* ಸ್ವತಃ ಸಾಧನೆಯನ್ನು ಮಾಡಿ ಎಲ್ಲರ ಪ್ರಗತಿಯನ್ನು ಮಾಡಿಸಿಕೊಳ್ಳುವವನು ೬೦

* ಚಿತ್ತದಲ್ಲಿರುವ ಕಾಮಾದಿ ದೋಷಗಳನ್ನು ನಾಶಗೊಳಿಸುವವನು ೬೦

೧೦. **ಶಿವಲೋಕ ಮತ್ತು ನಿವಾಸ** ೬೨

೧೧. **ಶಿವನ ಪ್ರಸಿದ್ಧ ಸ್ಥಾನಗಳು :** ಹನ್ನೆರಡು ಜ್ಯೋತಿರ್ಲಿಂಗಗಳು ಮತ್ತು ಅಮರನಾಥ ಹಾಗೂ ಕಾಶಿ ೬೨

೧೨. **ತಂತ್ರಶಾಸ್ತ್ರ (ಶಕ್ತಿಗೆ ಸಂಬಂಧಿಸಿದ ಶಾಸ್ತ್ರ)** ೬೪

೧೩. **ಶಿವ ಮತ್ತು ಶಕ್ತಿ :** ಶಕ್ತಿಯಿಲ್ಲದೆ ಶಿವನಿಗೆ ಕಾರ್ಯ ಮಾಡಲು ಸಾಧ್ಯವಿಲ್ಲ ೬೫

೧೪. **ಅನುಭೂತಿ** ೬೬